

# ಗುಡವಿಯಲ್ಲಿ ಕಲರವ



■ ಸುನೀಲ ಬಾರ್ಕೂರ
ಚಿತ್ರಗಳು : ಲೇಖಕರು ಮತ್ತು ಗೋಪಾಲ ಬಾರ್ಕೂರ

ಕರ್ನಾಟಕದ ಐದು ಪ್ರಮುಖ ಪಕ್ಷಿಧಾಮಗಳಲ್ಲಿ ಗುಡವಿ ಕೂಡ ಒಂದು. ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನಲ್ಲಿರುವ ಈ ಧಾಮವು ಸೊರಬದಿಂದ 15 ಕಿ.ಮೀ ದೂರದಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಹೊಂದಿಕೊಂಡಂತೆಯೇ ಇದೆ.

ಮುಕ್ಕಾಲು ಚದರ ಕಿ.ಮೀ ಗಳಷ್ಟು ಜಾಗದಲ್ಲಿ ಚಾಚಿಕೊಂಡಿರುವ ಈ ಪಕ್ಷಿಧಾಮದಲ್ಲಿ 48 ಜಾತಿಯ 217 ಪ್ರವರ್ಗಗಳ ಪಕ್ಷಿಗಳನ್ನು ಗುರುತಿಸಲಾಗಿದೆ. ಮಳೆಗಾಲದಲ್ಲಿ ತುಂಬುವ ಗುಡವಿ ಎಂಬ ಪುಟ್ಟ ಕೆರೆ ತೀರದಲ್ಲಿ ಜಗತ್ತಿನ ಎಲ್ಲೆಡೆಯಿಂದ ಹಕ್ಕಿಗಳು ವಲಸೆ ಬರುತ್ತವೆ. ಜೂನ್‌ನಿಂದ ಅಕ್ಟೋಬರ್‌ವರೆಗಿನ ಸಮಯದಲ್ಲಿ ಕೆರೆಯ ಆಸುಪಾಸಿನಲ್ಲಿ, ಬೆಳೆದು ನಿಂತಿರುವ ಮರಗಳ ಮೇಲೆ– ಠಿಕಾಣಿ ಹೂಡತ್ತವೆ. ಗುಡವಿಯ ಇಂಥ ದೃಶ್ಯ ಕಣ್ಣಿಗೊಂದು ಹಬ್ಬ.

ಗುಡವಿ ಕೆರೆಗೆ ಎಡತಾಕಿದಂತಿರುವುದು ವಡ್ಡೆಕೆರೆ ಎಂಬ ಇನ್ನೊಂದು ಕೆರೆ. ಈ ಕೆರೆಗೆ ಮಳೆಗಾಲದಲ್ಲಿ ಸೇರುವ ನೀರು ನಂತರ ಗುಡವಿ ಕೆರೆಗೂ ಸೇರುತ್ತದೆ. ಈ



